ಶ್ರೀ ಎಸ್.ಎಸ್. ಪಾಟೀಲ್ : ಭೂ-ನ್ಯಾಯ ಮಂಡಳಿಗಳಲ್ಲಿ ಪ್ರಕರಣಗಳು ಬಾಕಿ ಇವೆ. ಆದರೆ, ಭೂ ನ್ಯಾಯ ಮಂಡಳಿಗಳಿಗೆ ತಾವೇನು ಸದಸ್ಯರನ್ನು ನೇಮಿಸಿದ್ದೀರಿ, ಅದಕ್ಕೆ ತಡೆಯಾಜ್ಞೆಯಾಗಿದೆ. ಆ ರೀತಿ ಇದ್ದರೂ, ಮಂಡಳಿಗಳನ್ನು ನಡೆಸುತ್ತೀರಾ? ಇದೊಂದು ಮಹತ್ವದ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಶ್ರೀ ಎಸ್.ಪಿ. ಮುದ್ದಹನುಮೇಗೌಡರವರು, ಶ್ರೀ.ಡಿ.ವಿ. ಸದಾನಂದಗೌಡರವರು ತಂದಿರುವ ತಡೆಯಾಜ್ಞೆ ಬಗ್ಗೆ ಚರ್ಚೆಯಾಯಿತು. ಅದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ತಡೆಯಾಜ್ಞೆ ತೆರವು ಮಾಡಿಸಲು ಸರ್ಕಾರ ಪರಿಶೀಲಿಸುತ್ತಿದ್ದು, ಅದಕ್ಕೆ ಕ್ರಮ ತೆಗೆದುಕೊಂಡಿದೆ.

ಶ್ರೀ ಡಿ.ವಿ. ಸದಾನಂದಗೌಡ : ತಡೆಯಾಜ್ಞೆ ಇದೆ. ಇದು ಸರ್ಕಾರದ ಗಮನಕ್ಕೆ ಯಾವಾಗ ಬಂದಿತು? ಈ ಸಂಬಂಧದಲ್ಲಿ ಸರ್ಕಾರದ ನಿಲುವೇನು? ಕೋರ್ಟಿನಲ್ಲಿ ಯಾವ ಸ್ಟೇಜ್‌ನಲ್ಲಿದೆ? Let them explain to the House.

ಅಧ್ಯಕ್ಷರು : ತಡೆಯಾಜ್ಞೆ ತೆರವು ಮಾಡಿಸಲು ಅರ್ಜಿ ಹಾಕಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅದನ್ನು ತೆರವುಗೊಳಿಸಲು ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಅದನ್ನು ಶೀಘ್ರವಾಗಿ ತೆರವುಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ಕಮಿಟಿಗಳನ್ನು ಈಗ ರಚನೆ ಮಾಡುವ ಹಾಗಿಲ್ಲ. ತಾಲ್ಲೂಕು ಕೇಂದ್ರಗಳು ಸಹ ತೀರ್ಮಾನ ತೆಗೆದುಕೊಳ್ಳುವುದಿಲ್ಲ.

ಪುನರ್ವಸತಿ ಸಮಸ್ಯೆಗಳ ನಿವಾರಣೆಗೆ ರಚಿತವಾದ ಸಮಿತಿಯ ಸಭೆ ಕರೆಯದಿರುವುದು

513 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪುನರ್ವಸತಿ ಸಮಸ್ಯೆಗಳ ನಿವಾರಣೆಗಾಗಿ ರಚಿತವಾದ ಸಮಿತಿಯನ್ನು ವಿಸರ್ಜನೆ ಮಾಡಲಾಗಿದೆಯೇ?*

ಆ) *ಹಾಗಿಲ್ಲದಿದ್ದಲ್ಲಿ, ಸಮಿತಿ ಸಭೆ ಕರೆಯದಿರಲು ಕಾರಣಗಳೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ.

ಆ) ಪ್ರಥಮ ಸಭೆಯನ್ನು ದಿನಾಂಕ 28.6.2000ರಂದು ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿಸಲಾಗಿದೆ. ಸದರಿ ಸಭೆಗೆ ನಗರಾಭಿವೃದ್ಧಿ ಸಚಿವರೇ ಅಧ್ಯಕ್ಷರಾಗಿದ್ದು, ಅಧ್ಯಕ್ಷರ ನಿರ್ದೇಶನದ ಪ್ರಕಾರ ಮೇಲ್ಕಾಣಿಸಿದ ದಿನಾಂಕದಂದು ಸಭೆ ಕರೆಯಲಾಗಿತ್ತು. ಮಾನ್ಯ ಅಧ್ಯಕ್ಷರು ನಿಗಧಿಪಡಿಸಿದ ಪ್ರಕಾರ ಸಭೆಯನ್ನು ಪುನಃ ಕರೆಯಲಾಗುವುದು.

ಶ್ರೀ ಪಿ.ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಬಾಗಲಕೋಟೆ ಮತ್ತು ಇತರ ಗ್ರಾಮೀಣ ಪ್ರದೇಶ ಮುಳುಗಡೆಯ ಪ್ರಶ್ನೆಯಾಗಿದ್ದು, ಪುನರ್ವಸತಿ ಸಮಸ್ಯೆಗಳ ನಿವಾರಣೆಗಾಗಿ ಸಮಿತಿಯೊಂದನ್ನು ಸರ್ಕಾರ ರಚಿಸಿದ್ದು, ಆ ಸಮಿತಿಯು ಇದುವರೆಗೂ ಒಂದು ಸಭೆಯನ್ನೂ ಕರೆದಿಲ್ಲ. 15 ದಿವಸಗಳಿಗೊಮ್ಮೆ ಸಭೆ ಕರೆಯಬೇಕೆಂದು ಉದ್ದೇಶವಿದ್ದರೂ, 7 ತಿಂಗಳಾದರೂ ಒಂದು ಸಭೆ ಕರೆದಿಲ್ಲ. ಇದರ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಪ್ರಥಮ ಸಭೆಯನ್ನು ಅಲ್ಲಿನ ಜಿಲ್ಲಾ ಉಸ್ತುವಾರಿ ಸಚಿವರು ಕರೆದಿದ್ದಾರೆ. ಸಭೆಯ ದಿನಾಂಕವನ್ನೂ ಸಹ ಅವರೇ ನಿಗದಿಪಡಿಸುತ್ತಾರೆ. ಸಭೆ ಕರೆಯುವುದಕ್ಕೆ ನಾನು ಏರ್ಪಾಡು ಮಾಡಿಸುತ್ತೇನೆ. ಈಗಾಗಲೇ ಅದರ ಬಗ್ಗೆ ಕೂಲಂಕಷವಾಗಿ, ವಿವರವಾಗಿ ಮಾನ್ಯ ಹೆಚ್.ಕೆ. ಪಾಟೀಲರು ಉತ್ತರಿಸಿದ್ದು, ಮಾನ್ಯ ಅಧ್ಯಕ್ಷರು ಪುನಃ ಅದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಅಂಗನವಾಡಿ ಕೇಂದ್ರಗಳು

556 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ?

ಆ) ಹೊಸ ಅಂಗನವಾಡಿ ಕೇಂದ್ರಗಳನ್ನು ತೆರೆಯಲಾಗುವುದೇ?

ಇ) ಹಾಗಿದ್ದಲ್ಲಿ, ಎಂದಿನಿಂದ ತೆರೆಯಲಾಗುವುದು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) 40170 ಕೇಂದ್ರಗಳಿವೆ.

ಆ) ಹೊಸದಾಗಿ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಇ) ಕೇಂದ್ರ ಸರ್ಕಾರವು ಸಂಪನ್ಮೂಲ ಕೊರತೆಯಿಂದ ಹೆಚ್ಚುವರಿ ಅಂಗನವಾಡಿ ಕೇಂದ್ರಗಳನ್ನು ಹಾಲಿ ಮಂಜೂರು ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದೆ.

ಶ್ರೀ ಕರಿಯಣ್ಣ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ಆದರೆ, ಎಷ್ಟು ವರ್ಷಗಳಿಂದ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಸರ್ಕಾರದವರು ಹೆಚ್ಚು ಮಾಡಿಲ್ಲ? ಮತ್ತು ಅದಕ್ಕಾಗಿ ಎಷ್ಟು ಬೇಡಿಕೆಗಳು ರಾಜ್ಯ ಸರ್ಕಾರದ ಮುಂದಿದೆ ಎನ್ನುವ ಬಗ್ಗೆ ಸಹ ಅವರು ತಿಳಿಸಿಲ್ಲ. ಅನೇಕ ಜಿಲ್ಲೆಗಳಲ್ಲಿ ಎಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹರಿಜನ-ಗಿರಿಜನರಿದ್ದರೋ, ಆ ಕೇರಿಗಳಲ್ಲಿ ಇನ್ನೂ ಅಂಗನವಾಡಿ ಕೇಂದ್ರಗಳ ಕೊರತೆ ಇದೆ. ಕೊನೆಯಪಕ್ಷ ಅಂಗನವಾಡಿ ಕೇಂದ್ರಗಳ ಮೂಲಕ ಆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಒಂದು ಅನುಕೂಲ ಮಾಡಿಕೊಡುತ್ತಾರೆಯೇ? ಈ ವರ್ಷ ಏನಾದರೂ ಮಂಜೂರಾತಿ ಮಾಡಿ ಕೊಡುತ್ತಾರೆಯೇ?